ಮಲೆನಾಡು ಗಿಡ್ಡ ರಾಸುಗಳ ಉಚಿತ ವಿತರಣೆ

ಕೆಂಗೇರಿ,ಫೆ. 16:ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ ಹಾಗೂ ಒಕ್ಕಲಿಗ ಯುವ ಬ್ರಿಗೇಡ್ ಆಶ್ರಯದಲ್ಲಿ ಸಾವಯವ ಸಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತುಪ್ರದರ್ಶನ, ಉಚಿತ ಆರೋಗ್ಯ ಶಿಬಿರ, ಸರ್ವಜನಾಂಗದ ವಧು-ವರರ ಮುಖಾ-ಮುಖಿ ಜತೆಗೆ ಮಲೆನಾಡು ಗಿಡ್ಡ ರಾಸುಗಳ ಉಚಿತ ವಿತರಣೆಸಲಾಯಿತು.

ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾಜಿ ಲೋಕಾಯುಕ್ತ ಸಂತೋಷ ಹೆಗಡೆ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ಡಾ. ಸಿ ಎನ್ ಮಂಜುನಾಥ್ ಪಾಲ್ಗೊಂಡು ಮಾತನಾಡಿದರು. ಇದೇ ವೇಳೆ ಕಲಾವಿದ ದೇವರಾಜ್ ರಚಿಸಿರುವ ಕಲಾ ಕೃತಿಯನ್ನು ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ನಿಶ್ಚಲಾನಂದನಾಥ ಮಹಾಸ್ವಾಮೀಜಿ ಯವರಿಗೆ ನೀಡಿಗೃಯರು ಸನ್ಮಾನಿಸಿದರು. ಚಿತ್ರದುರ್ಗ ಯಾದವ ಗುರುಪೀಠದ ಪೀಠಾಧಿಪತಿ ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು.

ನಗರದ ಕೆಂಗೇರಿ ಉಪನಗರ ಜೆ.ಹೆಚ್.ಜಿ. ಕಾಲೋನಿ ನೇತಾಜಿ ಬಡಾವಣೆಯಲ್ಲಿರುವ ಶ್ರೀ ಸತ್ಯಗಣಪತಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ಪೂಜಾ ಕಾರ್ಯಕ್ರಮದಲ್ಲಿ ಅಧ್ಯಕ್ಷ ಹಾಗೂ ಜಿಡಿಪಿ ಮುಖಂಡ ಮಿರ್ಲೆ ವರದರಾಜ್‌ರವರು ಸೃಜಕ ಶಿವಲಿಂಗಕ್ಕೆ ಹಾಲನ್ನು ಅಭಿಷೇಕ ಮಾಡಿ ಶಿವಲಿಂಗಗಿಗೆ ವಿಶೇಷ ಅಲಂಕಾರದೊಂದಿಗೆ ಪೂಜೆ ನೆರವೇರಿಸಲಾಯಿತು. ಹೊಸೂರು ಧರ್ಮ ಇತರರು ಭಾಗವಹಿಸಿದ್ದರು.

ಶತಾಯುಷಿ, ಲೋಕನಾಯಕ, ಮಾಜಿ ಸಚಿವ ಡಾ. ಜಿಎಮ್ಆರ್ ಖಂಡ್ರೆಯವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಾಹಿತಿ ತಲಸಾಯಿ ಚಿಕ್ಕರಂಗೇಗೌಡ, ಎಂಇಎ ಅಧ್ಯಕ್ಷ ಎಸ್. ಮನೋಹರ್ ಅವರುಗಳು ಮನವಿ ಸಲ್ಲಿಸಿದರು.

ರೋಹಿತ್-ವಾಸಿಮ್ ಅಪ್ಪುಗೆ

ಕೊಲಂಬೊ,ಫೆ.16–ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಭಾರತ-ಪಾಕಿಸ್ತಾನ ಟಿ20 ವಿಶ್ವಕಪ್ 2026ರ ಹೈವೋಲ್ಟೇಜ್ ಪಂದ್ಯಕ್ಕೂ ಮುನ್ನ, ಭಾರತ ಮತ್ತು ಪಾಕಿಸ್ತಾನದ ಅಕ್ಕಾಂತರ ಕ್ರಿಕೆಟ್ ಅಭಿಮಾನಿಗಳ ಹೃದಯ ಗೆದ್ದ ಘಟನೆ ನಡೆದಿದೆ.

ಕ್ರೀಡಾಭಿಮಾನಿಗಳ ಈ ದೃಶ್ಯತಮ್ಮ ಹೃದಯದಲ್ಲಿ ಸೆರೆಹಿಡಿದಿದ್ದಾರೆ. ಭಾರತದ ಬ್ಯಾಟಿಂಗ್ ದಂತಕಥೆ ರೋಹಿತ್ ಶರ್ಮಾ ಮತ್ತು ಪಾಕಿಸ್ತಾನಿ ವೇಗಿ ವಾಸಿಮ್ ಅಕ್ರಮ್ ನಡುವಿನ ಆತ್ಮೀಯತೆ ಮೈದಾನದ ಪೈಪೋಟಿ ಪ್ರಾರಂಭವಾಗುವ ಮೊದಲೇ ಸುದ್ದಿಗಳಲ್ಲಿತ್ತು.

ಪಂದ್ಯ ಆರಂಭವಾಗುವ ಮೊದಲು, ರೋಹಿತ್ ಶರ್ಮಾ ಮತ್ತು ವಾಸಿಮ್ ಅಕ್ರಮ್ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. ಪಂದ್ಯಾವಳಿಯ ಬ್ರಾಂಡ್ ರಾಯಭಾರಿಯಾಗಿ ಆಗಮಿಸಿದ ರೋಹಿತ್, ವಾಸಿಮ್ ಅಕ್ರಮ್ ಅವರೊಂದಿಗೆ ಕೈಕುಲುಕಿ ಅವರನ್ನು ಬಿಸಿಕೊಂಡಿದ್ದರು. ಇಬ್ಬರು ಸ್ವಲ್ಪ ಹೊತ್ತು ಹರಟೆ ಹೊಡೆಯುತ್ತಾ ಒಟ್ಟಿಗೆ ಫೋಟೋಗಳಿಗೆ ಪೋಸ್ ನೀಡಿದ್ದಾರೆ. ಸಂಜೋಗ್ ಗುप्ता ಅವರೊಂದಿಗೆ ಟಿ20 ವಿಶ್ವಕಪ್ ಟ್ರೋಫಿಯನ್ನು ಮೈದಾನಕ್ಕೆ ಕೊಂಡೊಯ್ಯುವ ಮೊದಲು ಈ ಘಟನೆ ನಡೆದಿದೆ. ರೋಹಿತ್ ಅವರ ಸ್ನೇಹಪರ ವರ್ತನೆಗೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದ್ದು, ರೋಹಿತ್ ಶರ್ಮಾ ಈ ರೀತಿ ವರ್ತಿಸಬಾರದಿತ್ತು ಎಂದು ಕೆಲವು ಅಭಿಮಾನಿಗಳು ಛಾಯಿಸಿದ್ದರೂ, ಕೆಲವು ಅಭಿಮಾನಿಗಳು ಮಿಶ್ರ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ.

ರೋಹಿತ್ ಶರ್ಮಾ ಅಕ್ರಮ್ ಅವರನ್ನು ಭೇಟಿ ಮಾಡಿದ್ದಲ್ಲದೆ, ಭಾರತೀಯ ತಂಡದ ಶಿಬಿರಕ್ಕೂ ಭೇಟಿ ನೀಡಿ ಅವರು ಆಟಗಾರರು ಮತ್ತು ಸಹಾಯಕ ಸಿಬ್ಬಂದಿಯನ್ನು ಭೇಟಿ ಮಾಡಿ ಈ ದೊಡ್ಡ ಪಂದ್ಯಕ್ಕೆ ಶುಭ ಹಾರೈಸಿದ್ದರು.

ಭಾರತದ ಮಾಜಿ ನಾಯಕ ರೋಹಿತ್ ಶರ್ಮಾ ಅವರನ್ನು ಐಸಿಸಿ 2026 ರ ಟಿ20 ವಿಶ್ವಕಪ್‌ನ ಬ್ರಾಂಡ್ ಅಂಬಾಸಿಡರ್ ಎಂದು ಘೋಷಿಸಿದೆ. ಪಾಕಿಸ್ತಾನದ ಮಾಜಿ ನಾಯಕ ವಾಸಿಂ ಅಕ್ರಮ್ ಅವರನ್ನು ಐಸಿಸಿಯ ಕಾಮೆಂಟರಿ ತಂಡದಲ್ಲಿ ಸೇರಿಸಲಾಗಿದೆ.

ಭಾರತ-ಪಾಕಿಸ್ತಾನ ಪಂದ್ಯಕ್ಕೂ ಮುನ್ನ, ಐಸಿಸಿ ರೋಹಿತ್ ಮತ್ತು ಅಕ್ರಮ್ ಅವರಿಗೆ ಟಿ20 ಟ್ರೋಫಿಯನ್ನು ಹೊತ್ತೊಯ್ಯುವ ಜವಾಬ್ದಾರಿಯನ್ನು ವಹಿಸಿತ್ತು.

ಈ ಪಂದ್ಯದ ಗಮನಾರ್ಹ ಘಟನೆಯೆಂದರೆ ಭಾರತದ ನಾಯಕ ಸೂರ್ಯಕುಮಾರ್ ಯಾದವ್ ಪಾಕಿಸ್ತಾನಿ ನಾಯಕ ಸಲ್ಮಾನ್ ಅಲಿ ಆಘಾ ಅವರೊಂದಿಗೆ ಹಸ್ತಲಾಘವ ಮಾಡಲಿಲ್ಲ. ನಾಯಕರು ಕೈಕುಲುಕದೆ ಭಾರತೀಯ ತಂಡಗಳು ಪಾಕಿಸ್ತಾನವನ್ನು ಎದುರಿಸಿದ್ದು ಇದು ಎಳನೇ ಬಾರಿಯಾಗಿದೆ.

ಎಸ್. ಆರ್ಥರ್ ಲವ್‌ರಿಗೆ ರಾಷ್ಟ್ರೀಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

ಕೊಯಮತ್ತೂರು, ಫೆ.16:ನಾಲ್ಕು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಹಿರಿಯ ನಾಗರಿಕ ಹಾಗೂ ಶಿಕ್ಷಣ ತಜ್ಞ ಶ್ರೀ ಎಸ್. ಆರ್ಥರ್ ಲವ್ ಅವರಿಗೆ ರಾಷ್ಟ್ರೀಯ ಮಟ್ಟದ "ಅತ್ಯುತ್ತಮ ಶಿಕ್ಷಕ ಪ್ರಶಸ್ತಿ" ಪ್ರದಾನ ಮಾಡಲಾಗಿದೆ. ಶಿಕ್ಷಣ ಮತ್ತು ಸಮಾಜ ಸೇವೆಯಲ್ಲಿ ಅವರ ಅಪಾರ ಕೊಡುಗೆಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.

ಆರ್ಥರ್ ಲವ್ ಅವರು ಕಳೆದ 40 ವರ್ಷಗಳಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಶಾಲಾ ಬಿಡುವಿಕೆ ಪ್ರಮಾಣವನ್ನು ಕಡಿಮೆ ಮಾಡಲು ಮಹತ್ವದ ಪಾತ್ರವಹಿಸಿದ್ದಾರೆ. ಉಚಿತ ರಾತ್ರಿ ಶಾಲೆಗಳು, ಪೌಢಾರ ಶಿಕ್ಷಣ ಕಾರ್ಯಕ್ರಮಗಳು ಹಾಗೂ ಕ್ರೀಡೆ-ಕ್ರೀಡಾಕೂಟಗಳ ಉಚಿತ ಬೇಸಿಗೆ ತರಬೇತಿಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಉತ್ತೇಜನ ಮೂಡಿಸಿ, ಉತ್ತಮ ಸಾಧನೆಗೆ ದಾರಿ ತೋರಿಸಿದ್ದಾರೆ.

ಮಾನವ ಹಕ್ಕು ಹೋರಾಟಗರಾಗಿ ಅವರು ಮಕ್ಕಳ ಸಂವಿಧಾನಿಕ ಹಕ್ಕುಗಳ ರಕ್ಷಣೆಗೆ ಮುಂದಾಗಿದ್ದಾರೆ. ದೈಹಿಕ ಶಿಕ್ಷೆ, ಬಾಲಕಾರ್ಮಿಕತೆ ಹಾಗೂ ಬಾಲ್ಯವಿವಾಹಗಳ ವಿರುದ್ಧ ಜಾಗೃತಿ ಮೂಡಿಸಿ, ಮಕ್ಕಳ ಹಕ್ಕುಗಳ ಪಾಲನೆಗೆ ಸಂಬಂಧಿಸಿದಂತೆ ವಿವಿಧ ಸರ್ಕಾರಿ ಇಲಾಖೆ, ಎನ್‌ಜಿಒಗಳು, ನಾಗರಿಕ ಸಮಾಜ ಹಾಗೂ ಪೊಲೀಸ್ ಮತ್ತು ಶಿಕ್ಷಣ ಇಲಾಖೆಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಅಧಿಕಾರವೂ ಅವರಿಗೆ ನೀಡಲಾಗಿದೆ.

ಅವರು ಯುಎನ್ ಯುನಿಸೇಫ್ ಯುನೆಸ್ಕೋ ಹಾಗೂ TV9 ಸೇರಿದಂತೆ ಹಲವಾರು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಸ್ಥೆಗಳ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ. ಆರ್.ಎಸ್. ಲಾಲ್ ಅವರ ಸ್ಮರಣಾರ್ಥವಾಗಿ ನವಕ್ಕರೈ, ಕೊಯಮತ್ತೂರುನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನಿಸಲಾಯಿತು.

ಗೋಪುರ ನಿರ್ಮಾಣಕ್ಕೆ ಅರುಣ್ ಸೋಮಣ್ಣ ಚಾಲನೆ



ಬೆಂಗಳೂರು, ಫೆ. 16– ನಗರದ ರಾಜಧಾನಿಯ ಅರುಂಧತಿ ನಗರದ ಶ್ರೀ ಮುತ್ತುಮಾರಿಯಮ್ಮ ದೇವಸ್ಥಾನದ ಮುಂಭಾಗದ ಗೋಪುರ ಹಾಗೂ ಮೇಲ್ಚಾವಣಿ ನಿರ್ಮಾಣ ಕಾಮಗಾರಿಗೆ ಅಡ್ಡೂರಿ ಚಾಲನೆ ನೀಡಲಾಯಿತು.

ಕೇಂದ್ರ ಸಚಿವ ವಿ. ಸೋಮಣ್ಣ ಅವರ ಆಪ್ತವಾದದೊಂದಿಗೆ ನಡೆದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ, ಬಿಜೆಪಿ ಯುವ ಮುಖಂಡರಾದ ಡಾ. ಅರುಣ್ ಸೋಮಣ್ಣ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಾಮಗಾರಿಗೆ ಚಾಲನೆ ನೀಡಿದರು.

ದೇವಸ್ಥಾನದ ಅಭಿವೃದ್ಧಿ ಮತ್ತು ಗೋಪುರದ ಮೇಲ್ಚಾವಣಿ ನಿರ್ಮಾಣದ ಸಂಪೂರ್ಣ ವೆಚ್ಚವನ್ನು ಡಾ. ಅರುಣ್ ಸೋಮಣ್ಣ ಅವರೇ ಭರಿಸಿದ್ದಾರೆ. ಈ ಮೂಲಕ ಭಕ್ತಾದಿಗಳ ಬಹುದಿನದ ಕನಸನ್ನು ಸಾಕಾರಗೊಳಿಸಲು ಅವರು ಕೈಜೋಡಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ದೇವಸ್ಥಾನಗಳ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರದಲ್ಲಿ ಹಣವೂ ಇಲ್ಲ, ಅಭಿವೃದ್ಧಿ ಮಾಡುವಂತಹ ಮನಸ್ಸು ಇಲ್ಲ. ಬಿಜೆಪಿಯಿಂದ ಮಾತ್ರ ಅಭಿವೃದ್ಧಿ ಸಾಧ್ಯ. ಅಧಿಕಾರವಿರಲಿ ಅಥವಾ ಇಲ್ಲದಿರಲಿ, ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಅನುಕೂಲಕ್ಕಾಗಿ ನಾವು ಸದಾ ಕೆಲಸ ಮಾಡುತ್ತೇವೆ." ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯರಾದ ದಾಸೇಗೌಡ, ಪಿ. ಮೂರ್ತಿ, ಮುರುಗೇಶ್, ಕೆ.ಪಿ. ಮಂಜು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ರಿಯಾಂಕ್ ವಿರುದ್ಧ ಬಿವೈವಿ ಕಿಡಿ

ಬೆಂಗಳೂರು, ಫೆ. 16– ಆರ್‌ಎಸ್‌ಎಸ್ ನೋಂದಣಿ ಆಗುವಂತೆ ಮಾಡುತ್ತೇನೆ ಎಂದಿರುವ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಕಿಡಿಕಾರಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಚಿವ ಪ್ರಿಯಾಂಕ ಖರ್ಗೆಯವರೇ ನಿಮ್ಮ ತಂದೆ ಅಧ್ಯಕ್ಷರಾಗಿರುವ ರಾಜಕೀಯ ಭೂಪಟದಲ್ಲಿ ಅಸ್ತಿತ್ವ ಕಳೆದುಕೊಳ್ಳುವ ಅಂಚಿನಲ್ಲಿರುವ ಕಾಂಗ್ರೆಸ್ ಪಕ್ಷದ ನೋಂದಣಿ ರದ್ದತಿಯಾಗದಂತೆ ಮೊದಲು ಎಚ್ಚರ ವಹಿಸಿ. ನಂತರ ಇತರ ನೋಂದಣಿಗಳ ಬಗ್ಗೆ ತಲೆಕೆಡಿಸಿಕೊಳ್ಳುವಿರಂತೆ ಎಂದು ತಿರುಗೇಟು ನೀಡಿದ್ದಾರೆ.

ಈ ಬಗ್ಗೆ ಸೋಮವಾರ ಜಿಲ್ಲಾಡಳಿತ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಅಮೃತ ಹೊರ ಬರಲು ನಂಜು ನುಂಗಿದ ವಿಷಕಂಠನಂತೆ ಹಿಂದೂ ವಿರೋಧಿ ಕರ್ಕಾಟಕ ವಿಷ ಜಂತುಗಳ ಮೆಟ್ಟಿ ನಿಂತಿರುವ ಆರ್‌ಎಸ್‌ಎಸ್ ಸಂಸ್ಥೆಯನ್ನು ಕುಟುಕುವುದೇ ಮಂಚೇಗೌಡರ ಚೇಷ್ಟೆಯಾಗಿದೆ. ದೆವ್ವದ ಮನಸ್ಥಿತಿಯವರಿಂದ ದೈವ್ವದ ಮಾತು ಹೊರ ಬರಲು ಸಾಧ್ಯವೇ ಎಂದು ಪ್ರಿಯಾಂಕ್ ವಿರುದ್ಧ ಹರಿಹಾಯ್ದಿದ್ದಾರೆ.

ರಾಜಕಾರಣದಲ್ಲಿ ನಿರಂತರ ರಾಜಕೀಯ ಅಧಿಕಾರ ಅನುಭವಿಸುತ್ತಾ ಬಂದಿರುವ ಖರ್ಗೆ ಕುಟುಂಬದ ಕೊಡುಗೆ ಏನೆಂದರೆ, ಭಾರತದ ಭೂಪಟದಲ್ಲಿ ಕಲ್ಯಾಣ ಕರ್ನಾಟಕವನ್ನು ಅತ್ಯಂತ ಹಿಂದುಳಿಯುವಂತೆ ಮಾಡಿದ್ದು ಎಂದು ಅವರು ವ್ಯಂಗ್ಯವಾಡಿದ್ದಾರೆ.

ಪ್ರಿಯಾಂಕ ಖರ್ಗೆಯವರು ಸಚಿವರಾದ ಮೇಲೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಏನು ಕೊಡುಗೆ ಕೊಟ್ಟಿದ್ದಾರೆ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಹಾಗೂ ಕೀಳು ಪ್ರಚಾರದ ತೆವಲಿನಿಂದ ಆರ್‌ಎಸ್‌ಎಸ್‌ನ್ನು ಗುರಿಯಾಗಿಸಿಕೊಂಡು ಸಜ್ಜನಿಕೆ ಇಲ್ಲದೆ ಕೀಳು ಅಭಿರುಚಿಯ ಟೀಕೆ ಮಾಡುವ ತೆವಲು ಹಚ್ಚಿಕೊಂಡಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದ್ದಾರೆ.

ಪ್ರಿಯಾಂಕ ಖರ್ಗೆಯವರ ಆರ್‌ಎಸ್‌ಎಸ್ ವಿರೋಧಿ ಮಾತುಗಳಲ್ಲಿ ರಾಷ್ಟ್ರದ್ರೋಹಿ ಶಕ್ತಿಗಳನ್ನು ಮೆಚ್ಚಿಸುವ ಹಾಗೂ ಹಿಂದೂ ಧರ್ಮವನ್ನು ಅವಮಾನಿಸುವ ಹಿನ್ನೆಲೆಯ ಮನಸ್ಥಿತಿ ಅಡಗಿದೆ. ಕಾಂಗ್ರೆಸ್ ಪಕ್ಷ ಹಿಂದೂ ಪರಂಪರೆ ಮತ್ತು ಹಿಂದೂಪರ ಸಂಘಟನೆಗಳನ್ನು ತೇಜೋವಧೆ ಮಾಡುವುದಕ್ಕಾಗಿಯೇ ಪ್ರಿಯಾಂಕ ಖರ್ಗೆಯವರಂತಹ ವಕ್ತಾರರುಗಳನ್ನು ನೇಮಿಸಿರುವಂತಿದೆ ಎಂದು ಅವರು ದೂರಿದ್ದಾರೆ.

ರಾಷ್ಟ್ರಪಕ್ಷ ಸಂಘಟನೆಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ನಿಂದಿಸುವುದು, ಹಿಂದೂ ಧರ್ಮವನ್ನು ಅವಹೇಳನ ಮಾಡುವುದು, ಹಿಂದೂಪರ ಕಾರ್ಯಕರ್ತರು ಹಾಗೂ ದಾರ್ಶನಿಕರನ್ನು ಗುರಿಯಾಗಿಸಿಕೊಳ್ಳುವುದು ಕಾಂಗ್ರೆಸ್ ಪಕ್ಷದ ಕಾರ್ಯಸೂಚಿಯಾಗಿದೆ ಎಂದು ಅವರು ದೂರಿದ್ದಾರೆ.

ಕಾಂಗ್ರೆಸ್ ಗಿಡ ಎಂದೇ ಹೆಸರಾಗಿರುವ ಪಾರ್ಥೇನಿಯಂನಂಥ ಕಾಂಗ್ರೆಸ್ ಪಕ್ಷವನ್ನು ಕಳೆಯುವುದು ಜನತೆ ಈಗಾಗಲೇ ದೇಶದಲ್ಲಿ ಬಹುತೇಕ ಕಿತ್ತೆಸೆದಿದ್ದಾರೆ. ರಾಜ್ಯದಲ್ಲೂ ಜನರು ಕಳೆ ಕೀಳಲು ಆರಂಭಿಸಿದ್ದಾರೆ. 2028 ರಲ್ಲಿ ಅದು ಪರಿಪೂರ್ಣಗೊಳ್ಳಲಿದೆ. ಆಗ ಪ್ರಿಯಾಂಕ ಖರ್ಗೆ ಯಾವ ನೋಂದಣಿ ಕಚೇರಿ ಮುಂದೆ ನಿಂತಿರುತ್ತಾರೋ ಕಾದು ನೋಡೋಣ ಎಂದು ವಿಜಯೇಂದ್ರ ವ್ಯಂಗ್ಯವಾಡಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಸನೀಯ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **BHAVANI.S**, Aged about 31 years, W/o **Mr. Mohan Reddy.M** R/at No.25, 3rd Main,7th Cross, Opp Road Of Canara Bank, Domlur Layout, Bangalore-560071. do hereby my correct Name is **Bhavani.S.** But in my School records (T.C) my name mentioned as **Bhavya.S.** Hence I request concerned school Authorities to change my name from **Bhavya.S to Bhavani.S.** for all practical purposes in my future **Bhavani.S** only. Vide affidavit dated : **16-12-2026**. Sworn before Notary **D.B.RAMESH BASHKAR**, Bangalore.

ಕಾಣೆಯಾಗಿದ್ದಾರೆ

ಅನ್ನರಾಜ್

ಈ ಮೇಲ್ಕಂಡ ಛಾಯಾಚಿತ್ರದಲ್ಲಿರುವ ಅನ್ನರಾಜ್ ಎಂಬ 65 ವರ್ಷ ವಯಸ್ಸಿನ ವ್ಯಕ್ತಿ ದಿನಾಂಕ: 28.12.2025 ರಂದು ಸಂಜೆ 5 ಗಂಟೆ ವೇಳೆ ಮನೆಯಿಂದ ಹೊರಗೆ ಹೋಯಿದವು ಇಂದಿರೆಗೂ ವಾಪಸ್ ಬಂದಿಲ್ಲ. 5.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕೋಲು ಮುಖ, ಕಪ್ಪು ಮೈ, ಬಲಗಾಲಿನ ಮೊಣಕಾಲು ಹತ್ತಿರ ಹಳೆಯ ಗಾಯದ ಕಲೆ ಇದೆ. ಕನ್ನಡ, ತಮಿಳು, ಇಂಗ್ಲಿಷ್ ಮಾತನಾಡುತ್ತಾರೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಿದಲ್ಲಿ ಹತ್ತಿರದ ಪೊಲೀಸ್ ಠಾಣೆಗಾಗಲಿ ಅಥವಾ ಈ ಕೆಳಕಂಡ ವಿಳಾಸಕ್ಕೆ ತಿಳಿಸುವುದು.

ಹೋಲ್ಸ್ ಕಂಪ್ಯೂಟರ್ ನಂ. 0005/2026,
ದಿನಾಂಕ: 03.01.2026

ಸಂಪರ್ಕಿಸಿ: ರಜಿನಾ
ನಂ. 55, ಕೆಟಿಎಂ ಬಾ ನೆಗರ,ಹಾಂಬರ ಮುಖ್ಯರಸ್ತೆ, ಡಿ.ಜಿ.ಹಳ್ಳಿ,ಬೆಂಗಳೂರು–560045.
ಮೊ: 9972002726.

BEFORE THE DEPUTY REGISTRAR OF CHITS, 1st ZONE, BENGALURU URBAN DISTRICT, BENGALURU
DISPUTE NO. DRB/CFS/78/2025-26

BETWEEN: Smt. Sneha .S, D/o Surendra Kumar, aged about 28 Years, R/at No. 202/19, AZTEC L1, 1st Main Road, 3rd Cross, ASHBUREN, VA-20147, U.S.A, Represented by her Power of Attorney Holder, Smt.Saramma.S, W/o C.Surendra Kumar, aged about 52 years, R/at No. 60, 4th Floor, Punam Park, 17th 'A' Cross, Near BBMP Office, AD Halli, Bengaluru-560079.

AND: Navashakthi Chits Private Ltd., R.O at No.553/7, 7th Cross, 3rd Main, Ayyappa Temple Road, Prakashnagar, Bengaluru-560021. Rep by Authorized Signatory. ... **RESPONDENT**

NOTICE TO THE RESPONDENT

Navashakthi Chits Private Ltd., R.O at No.553/7, 7th Cross, 3rd Main, Ayyappa Temple Road, Prakashnagar, Bengaluru-560021. Rep by Authorized Signatory

Whereas, the Petitioner has instituted above Memorandum of Petition Under Section 64 R/W. Sec 66 & 67 of the Chit Funds Act, against the Respondent. In the said Dispute, the notice sent to the Respondent Company i.e., Navashakthi Chits Private Ltd., returned was returned un-served, with remarks stated that "addressee left without intimation with postal shara dated 20.11.2025".

Hence, you are hereby summoned to appear in person or through a pleader on **06.03.2026** at **03:00 PM** to answer all material questions relating to the above case, failing which the matter will be heard and decided in your absence.

Given under my hand and seal of the Authority on this 13/02/2026

By order of the Author, Deputy Registrar Of Chits, 1st Zone, Bengaluru Urban District, Bengaluru

BEFORE THE DEPUTY REGISTRAR OF CHITS, 1st ZONE, BENGALURU URBAN DISTRICT, BENGALURU
DISPUTE NO. DRB/CFS/76/2025-26

BETWEEN: Sri. Reji .T John, S/o T.P.John, aged about 49 Years, (P/O) Roto Therm Bakery Equipments, R/at No. 24, 11th Cross, Peenya 2nd Stage, Doddanna Industrial Estate, Bengaluru-560091.

AND: Navashakthi Chits Private Ltd., R.O at No.553/7, 7th Cross, 3rd Main, Ayyappa Temple Road, Prakashnagar, Bengaluru-560021. Rep by Authorized Signatory. ... **RESPONDENT**

NOTICE TO THE RESPONDENT

Navashakthi Chits Private Ltd., R.O at No.553/7, 7th Cross, 3rd Main, Ayyappa Temple Road, Prakashnagar, Bengaluru-560021. Rep by Authorized Signatory

Whereas, the Petitioner has instituted above Memorandum of Petition Under Section 64 R/W. Sec 66 & 67 of the Chit Funds Act, against the Respondent. In the said Dispute,